ಸಾಕ್ಷಿಯನ್ನು ದಿನಾಂಕಃ26.11.2019 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ ಎನ್.ಎ. ವಕೀಲರಿಂದ.**

ಸಾಕ್ಷಿ ಇಂದು ಸಾಕ್ಷಿ ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ, ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿದ್ದು ಹಾಗೂ ಅದರಲ್ಲಿರುವ ರುಜು ತನ್ನದೇ ಎಂದು ಹೇಳಿರುತ್ತಾರೆ.

ಆರು ಕೈ ಬರಹದ ಆರ್‌ಟಿಸಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-6 ಎಂದು ಗುರುತಿಸಲಾಯಿತು. ಎರಡು ಗಣಕೀಕೃತ ಆರ್‌ಟಿಸಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು. ಆರ್‌ಆರ್‌ಟಿ ಅಪೀಲು 115/2014-15ರ ಆದೇಶದ ದೃಢೀಕೃತ ಪ್ರತಿ ನಿಪಿ-9 ಎಂದು, ದಿಃ06.06.2016ರ ಹಕ್ಕು ಖುಲಾಸೆ ಪತ್ರ ನಿಪಿ-10 ಎಂದು, ಎರಡು ಋಣಭಾರಹಿತ ಪತ್ರಗಳು ನಿಪಿ-11 ಮತ್ತು ನಿಪಿ-12 ಎಂದು ಗುರುತಿಸಲಾಯಿತು. ದಿಃ21.10.1940ರ ಕ್ರಯಪತ್ರದ ದೃಢೀಕೃತ ಪ್ರತಿ ನಿಪಿ-13 ಎಂದು ಗುರುತಿಸಲಾಯಿತು. ಒಂದು ಗಣಕೀಕೃತ ಆರ್‌ಟಿಸಿ ನಿಪಿ-14 ಎಂದು ಗುರುತಿಸಲಾಯಿತು.

ಮುಂದುವರೆದು ಮುಖ್ಯ ವಿಚಾರಣೆಗೆ ವಕೀಲರು ಕಾಲವಕಾಶ ಕೋರಿರುತ್ತಾರೆ, ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್.